ಅಧ್ಯಾಯ 3

ಹಾಗೆ ಕಾಯಕನಾಥನನ್ನು ಕರೆದೊಯ್ಯುವಾಗ ಆ ಅಧಿಕಾರಿ ತನ್ನನ್ನು ತಾನು ಪರಿಚಯಿಸಿಕೊಂಡರು. ಅವರ ಹೆಸರು ಯೋಗೀಶ ಎಂದೂ, ಅವರು ಅರಣ್ಯ ಇಲಾಖೆಯಲ್ಲಿ ಗಾರ್ಡ್ ಆಗಿ ಕೆಲಸ ಮಾಡುತ್ತಿರುವುದಾಗಿಯೂ, ಹೀಗೆ ಅರಣ್ಯವನ್ನು ಸುತ್ತುವುದು, ಬೇಟೆ, ಗಾಂಜಾ ಸೇವನೆ, ಚಾರಣದ ಹೆಸರಲ್ಲಿ ಮೋಜು ಮಸ್ತಿ... ಇತ್ಯಾದಿ ಇಂಥ ಏನಾದರೂ ಅಹಿತಕರ ಚಟುವಟಿಕೆಗಳು ನಡೆಯದಂತೆ ಕಾಯುವುದು, ಕಂಡರೆ ಕಾನೂನಿನ ಪ್ರಕಾರ ಶಿಕ್ಷೆ ಕೊಡಿಸುವುದು ತನ್ನ ವ್ಯಾಪ್ತಿಯ ಕೆಲಸವೆಂದೂ ವಿವರಿಸಿದರು ಯೋಗೀಶರು. ಪ್ರತಿದಿನ ಇಷ್ಟು ಕಿ.ಮೀ. ಬೀಟ್ ತಿರುಗಬೇಕಾಗಿಯೂ ಪ್ರತೀ ದಿನ ಡೈರಿ ಬರೆದು ಇಲಾಖೆಗೆ ಒಪ್ಪಿಸಬೇಕಾಗಿದೆ ಎಂದೂ ತಮ್ಮ ಕೆಲಸದ ವ್ಯಾಪ್ತಿಯನ್ನು ತಿಳಿಸಿದರು.

ಕಾಯಕನಾಥ ಬರೀ ಆಲಿಸುತ್ತ ನಡೆದವನು ಸುಮ್ಮನೇ ಬಾಯಿ ಮಾತಿಗೆ ಕೇಳಿದ, 'ಇಲ್ಲಿ ಕಾಡು ಪ್ರಾಣಿಗಳಿವೆಯೇ ಅಂದರೆ ಕ್ರೂರ ಪ್ರಾಣಿಗಳು... ನಾನು ಕಡವೆ, ಆನೆಗಳನ್ನು ನೋಡಿದೆ...'

'ಇಷ್ಟು ದಿನ ಇರಲಿಲ್ಲ.. ಇನ್ನು ನೀನು ಬಂದೆಯಲ್ಲ ಅಂದರೆ ಮನುಷ್ಯನಿಗಿಂತ ಕ್ರೂರ ಪ್ರಾಣಿ ಬೇರೊಂದಿದೆಯೇ?' ಯೋಗೀಶರ ಮಾತು ಮಾರ್ಮಿಕವಾಗಿತ್ತಾದರೂ, ಮಾತಿನ ಮೊನಚು ಗ್ರಹಿಸಿ ಕಾಯಕನಾಥ ಪೆಚ್ಚಾದ.

'ನಾನು ಹೇಳಿದೆನಲ್ಲ ನಾನೇನೂ ಇಲ್ಲಿ ಅಪಚಾರ ಎಸಗಲು ಬಂದಿಲ್ಲವೆಂದು. ನನ್ನ ಸಾಚಾತನ ಹೇಗೆ ಸಾಬೀತು ಪಡಿಸಲಿ? ನನ್ನನ್ನು ನೀವು ನಂಬುವುದಿಲ್ಲವೇ?'

ಯೋಗೀಶರು ಮುಂದೆ ನಡೆಯುತ್ತಿದ್ದವರು, ನಿಂತು ಒಮ್ಮೆ ತಿರುಗಿ ನೋಡಿ ಹೇಳಿದರು, 'ನೀನು ಇಲ್ಲೇ ಇರುವೆ... ನಾನೂ ಇಲ್ಲಿ ಬರುವೆ. ನೋಡೋಣ. ಇಬ್ಬರೂ ಸಾಕ್ಷಿಯಾಗಿ ನಿಲ್ಲುತ್ತೇವೆ. ನೀನೇನೋ ನಾಡಿನಿಂದ ಕಾಡಿಗೆ ಬಂದೆ. ಮನುಷ್ಯ ನಾಗರಿಕನಾದಂತೆ, ನಗರವೆಂದರೆ ಅವನ ದೃಷ್ಟಿಕೋನದಲ್ಲಿ ಕನಸು, ಕನವರಿಕೆಗಳು, ಆಸೆ, ಆಮಿಷ, ಸಂಪಾದನೆ, ಆಕರ್ಷಣೆ... ಅದೆಲ್ಲವೂ ಅನುಭವಿಸಿದವನು, ಈಗ ಅಲ್ಲಿ ಬಿಟ್ಟು ಇಲ್ಲಿ ಬಂದರೆ ಅದನ್ನು ನೀನು ಇಲ್ಲಿ ಹುಡುಕದೇ ಇರುತ್ತೀಯಾ? ಸಾಧ್ಯವೇ ನಿನ್ನಿಂದ?"

'ನಾನು ಅದೆಲ್ಲವೂ ಬೇಡವೆಂದು ಬಿಟ್ಟು ಬಂದವನು. ಇದ್ದಷ್ಟು ದಿನ ಇಲ್ಲೇ ಕೊರಗಿ ಸತ್ತು ಮಣ್ಣಲ್ಲಿ ಕರಗಿಹೋಗುವೆ ಅಷ್ಟೇ ನೀವು ಚಿಂತಿಸದಿರಿ' ಎಂದ ವಿಷಣ್ಣತೆಯಲ್ಲಿ. ಮತ್ತೆ ಯೋಗೀಶರು ಮೌನವಾಗಿ ಮುಂದೆ ಹೆಜ್ಜೆ ಹಾಕಿದರು.

ಇಬ್ಬರೂ ಕುಮುದಿನಿ ನದಿಯ ದಡಕ್ಕೆ ಬಂದರು. ಬೇಸಿಗೆ ಕಾಲವಾದ್ದರಿಂದ ಅಷ್ಟೊಂದು ನೀರಿನ ಆಳವಿರಲಿಲ್ಲ. ನದಿಯ ನೆಲ ಕಾಣುವಷ್ಟು ನೀರು ತಿಳಿಯಾಗಿತ್ತು. ಯೋಗೀಶರು ತಮ್ಮ ಪ್ಯಾಂಟಿನ ಕಾಲನ್ನು ಮೇಲಕ್ಕೆ ಮಡಚಿಕೊಂಡು ನೀರಿಗಿಳಿದರು. ಕಾಯಕನಾಥನಿಗೆ ಅವನ ಬಟ್ಟೆಯ ಪರಿವೆ ಇರಲಿಲ್ಲ. ಅವನು ಹಾಗೇ ಇಳಿದು ಬಟ್ಟೆ ಒದ್ದೆ ಮಾಡಿಕೊಳ್ಳುತ್ತಲೇ ನದಿ ದಾಟಿದ. ಇಡೀ ಮುಳುಗಿದವನಿಗೆ ಮಳೆಯೇನು, ಚಳಿಯೇನು ಎಂಬ ಗಾದೆಯಂತೆ, ವಿರಕ್ತಿಯಲ್ಲಿ ಬಿದ್ದವನಿಗೆ ಜೀವನ, ಮರಣ ಎರಡೂ ಸಮಾನವೆಂಬಂಥ ಮನಸ್ಥಿತಿಯಲ್ಲಿದ್ದ. ಸ್ವಲ್ಪ ಮುಂದೆ ಕಾಡಿನ ದಟ್ಟತೆ ಅಷ್ಟೇನೂ ಇರಲಿಲ್ಲ. ಸಣ್ಣ ಗಿಡಗಂಟಿಗಳು, ಪೊದೆಗಳು ದೂರದಲ್ಲಿ ಅಲ್ಲಲ್ಲಿ ಮರಗಳು ಬೆಳೆದಿದ್ದವು. ಯೋಗೀಶರು ಸ್ವಲ್ಪ ಹೊತ್ತು ಪರೀಕ್ಷಾತ್ಮಕವಾಗಿ ಏನನ್ನೋ ಹುಡುಕುವಂತೆ ಹೆಜ್ಜೆ ಹಾಕಿದವರಿಗೆ ಕೊನೆಗೂ ತಾವು ಅರಸುತ್ತಿದ್ದ ಒಂದು ಸರ್ವೆ ಕಲ್ಲು ಸಿಕ್ಕಿತು. ಅದನ್ನು ತೋರುಬೆರಳಲ್ಲಿ ಕಾಯಕನಾಥನಿಗೆ ತೋರಿಸುತ್ತಾ,'ಇಲ್ಲಿಂದ ಈಚೆಗೆ ನೀನು ಉಳಿದುಕೊಳ್ಳಬಹುದು... ನನ್ನ ಅಭ್ಯಂತರ ಇರುವುದಿಲ್ಲ. ಆದರೆ...' ಎಂದು ಮಾತು ನಿಲ್ಲಿಸಿದರು.

'ಎಷ್ಟು ಸಮಯ ನೀನು ಯಾವ ಸಂಪನ್ಮೂಲ ಇಲ್ಲದೇ ಉಳಿಯಬಹುದು ಎಂಬುದು ನಿನಗೆ ಬಿಟ್ಟದ್ದು. ಹಾಗೊಂದು ವೇಳೆ ನೀನಿಲ್ಲಿ ಬದುಕಿಯೇ ಸಿದ್ಧ ಎಂದರೆ ಸರಿ... ಇಲ್ಲದೇ ಹೋದರೆ... ಬಂದ ದಾರಿ ನಿನಗೆ ಗೊತ್ತೇ ಇದೆ, ಹೋಗಬಹುದು. ಒಂದು ವೇಳೆ ಸತ್ತರೆ ಇಲ್ಲೇ ಕೊಳೆತು ಹೋಗುವೆ ಅಷ್ಟೇ..' ಯೋಗೀಶರಿಗೆ ಅವನು ಅಲ್ಲಿಂದ ಹೊರಡಲಿ ಎಂಬ ಆಶಯವೇ ಹೆಚ್ಚಾಗಿತ್ತು. ಸದ್ಯದ ಅವನ ಮನಸ್ಥಿತಿಯಲ್ಲಿ ಅವನು ತೀರಾ ವಿಚಲಿತನೂ ವ್ಯಾಕುಲನೂ ಆಗಿದ್ದರಿಂದ ತಾವು ಬಿಟ್ಟು ಬಂದರೂ ಅವನು ಪ್ರಾಣ ಕಳೆದುಕೊಳ್ಳಬಹುದೆಂಬ ಅಂಜಿಕೆಯಿಂದ, ಸ್ವಲ್ಪ ದಿನ ಅವನನ್ನು ಹಾಗೇ ಬಿಟ್ಟರೆ ಇಲ್ಲಿನ ವಾತಾವರಣದಿಂದ ಬೇಸತ್ತು ಓಡಿ ನಗರ ಸೇರಬಹುದೆಂಬುದು ಅವರ ಲೆಕ್ಕಾಚಾರವಾಗಿತ್ತು.

'ಎಷ್ಟು ಸಮಯ ನೀನು ಯಾವ ಸಂಪನ್ಮೂಲ ಇಲ್ಲದೇ ಉಳಿಯಬಹುದು ಎಂಬುದು ನಿನಗೆ ಬಿಟ್ಟದ್ದು. ಹಾಗೊಂದು ವೇಳೆ ನೀನಿಲ್ಲಿ ಬದುಕಿಯೇ ಸಿದ್ಧ ಎಂದರೆ ಸರಿ... ಇಲ್ಲದೇ ಹೋದರೆ... ಬಂದ ದಾರಿ ನಿನಗೆ ಗೊತ್ತೇ ಇದೆ, ಹೋಗಬಹುದು. ಒಂದು ವೇಳೆ ಸತ್ತರೆ ಇಲ್ಲೇ ಕೊಳೆತು ಹೋಗುವೆ ಅಷ್ಟೇ..' ಯೋಗೀಶರಿಗೆ ಅವನು ಅಲ್ಲಿಂದ ಹೊರಡಲಿ ಎಂಬ ಆಶಯವೇ ಹೆಚ್ಚಾಗಿತ್ತು.

ಸದ್ಯದ ಅವನ ಮನಸ್ಥಿತಿಯಲ್ಲಿ ಅವನು ತೀರಾ ವಿಚಲಿತನೂ ವ್ಯಾಕುಲನೂ ಆಗಿದ್ದರಿಂದ ತಾವು ಬಿಟ್ಟು ಬಂದರೂ ಅವನು ಪ್ರಾಣ ಕಳೆದುಕೊಳ್ಳಬಹುದೆಂಬ ಅಂಜಿಕೆಯಿಂದ, ಸ್ವಲ್ಪ ದಿನ ಅವನನ್ನು ಹಾಗೇ ಬಿಟ್ಟರೆ ಇಲ್ಲಿನ ವಾತಾವರಣದಿಂದ ಬೇಸತ್ತು ಓಡಿ ನಗರ ಸೇರಬಹುದೆಂಬುದು ಅವರ ಲೆಕ್ಕಾಚಾರವಾಗಿತ್ತು.

'ಹ್ಞಾಂ ಮರೆತೆ. ಇದು ಯಾರ ಖಾಸಗಿ ಸ್ವತ್ತು ಅನ್ನೋದು ನನಗೆ ಗೊತ್ತಿಲ್ಲ. ಅವ್ರು ಎಷ್ಟೋ ವರ್ಷಗಳಿಂದ ಇದರ ಮೇಲೆ ತಮ್ಮ ಹಕ್ಕು ಸ್ಥಾಪಿಸಿಲ್ಲ. ಮುಂದೆ ಬರುವರೋ ಇಲ್ಲವೋ ಅದೂ ಗೊತ್ತಿಲ್ಲ. ಅವರು ಬಂದು ನಿನ್ನನ್ನು ಎಬ್ಬಿಸಿ ಓಡಿಸಿದರೆ... ಮತ್ತೆ ನೀನು ಬೇರೆ ನೆಲೆ ಹುಡುಕಿ ಹೋಗಬೇಕಾದೀತು. ಅದಕ್ಕೆ ನಾನು ಜವಾಬ್ದಾರನಲ್ಲ' ಎಂದೂ ಎಚ್ಚರಿಸಿದರು.

ತಾನೇನೂ ಇಲ್ಲಿ ಮನೆ ಕಟ್ಟಿ ನೆಲೆಸುವುದಿಲ್ಲ. ಜಂಗಮನಂತೆ ಅಲೆದಾಡಿ ಬದುಕುವವನು. ಬಂದಾಗ ಎದ್ದು ನಡೆದರಾಯಿತು... ಎಂದು ಯೋಚಿಸಿದ ಕಾಯಕನಾಥ ಮೌನವಾಗಿ ತಲೆದೂಗಿದ. ಯೋಗೀಶರು ತಾವು ಕಟ್ಟಿ ತಂದಿದ್ದ ಬುತ್ತಿಯನ್ನು ಬಿಚ್ಚಿ ಅವನ ಮುಂದೆ ತೆರೆದಿಟ್ಟರು. ಬರೀ ಹಣ್ಣೂ, ನೀರು ಕುಡಿದು ಕಾಲ ಕಳೆದಿದ್ದ ಕಾಯಕನಾಥನಿಗೆ ಅವನ ಮುಂದಿದ್ದ ಉಪಾಹಾರಕ್ಕೆ ಹಸಿವು ಭುಗಿಲೆದ್ದಿತು. ಆತುರದಿಂದ ಕೈಗೆತ್ತಿಕೊಂಡವನಿಗೆ ಮರುಕ್ಷಣ ವಿವೇಕ ಎಚ್ಚರಿಸಿತು. ಅದನ್ನು ಹಾಗೇ ಮರಳಿ ಇಟ್ಟ. 'ಬೇಡ... ನಿಮಗೆ ತಂದದ್ದು ನಾನು ಸೇವಿಸಿದರೆ ನೀವು ಉಪವಾಸ ಇರಬೇಕಾಗುತ್ತೆ. ನೀವು ಇನ್ನೂ ಎಷ್ಟು ಕಿ.ಮೀ. ನಡೆಯಬೇಕೋ ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡಿ. ನೀವಿಷ್ಟು ಉಪಕಾರ ಮಾಡಿದ್ದು ಹೆಚ್ಚೇ ನನಗೆ' ಎಂದು ಕಾಯಕನಾಥ ಕೈ ಮುಗಿದ.

**(ಸಶೇಷ)**

## ಅಸತೋಮ.....

**ಪ್ರತಿಕ್ರಿಯೆ**

### ಅಂತೂ ಮುಗಿಯಿತು

ಅಸತೋಮ (ಕೌಂಡಿನ್ಯ) ಅಂತೂ ಮುಗಿಯಿತು. ದ್ವೇಷ, ಪ್ರತೀಕಾರಗಳ ಅಭಿವ್ಯಕ್ತತೆ ಮಾಟ, ಮಂತ್ರ, ವಾಮಾಚಾರಗಳ ಕಥೆಯಲ್ಲಿ ಹೊಸತೇನೂ ಇಲ್ಲ. ಮೂಲಕ! ಯಾವ ಒಳ್ಳೆಯ ವಿಚಾರವಿದೆ ಅದರಲ್ಲಿ? ಸಂಬಂಧ, ಸ್ನೇಹ ಯಾವುದಕ್ಕೂ ಮಹತ್ವವಿಲ್ಲ. ಈಗಿನ ಕಾಲದಲ್ಲಿ ನಂಬುವಂತಹುದೇ ಈ ವಿದ್ಯೆ.

– ವಿನುತಾ ಹಂಚಿನಮನಿ

### ಸಿನಿಮೀಯ

ಇಂತಹ ಒಂದು ಭೀಭತ್ಸದ ಮತ್ತು ಅಷ್ಟೇ ಕುತೂಹಲ ಹೊಂದಿದ್ದ ಕ್ರೂರ ಕಥೆಯನ್ನು 'ಸುಧಾ'ದಲ್ಲಿ ಓದಿದ ನೆನಪೇ ಇಲ್ಲ. ಮುಕ್ತಾಯ ಸಿನಿಮೀಯವಾಗಿದೆ. 'ಅಸತೋಮ' ಸದ್ಗಮಯ' ಆಗದಿರುವುದು ದುರಂತವೇ ಸರಿ.

–ಕೆ.ಎಸ್. ಚಂದ್ರಶೇಖರ್, ಮೈಸೂರು

### ಅರ್ಥವಿಲ್ಲದ ಧಾರಾವಾಹಿ

ಒಂಬತ್ತು ವಾರಗಳ ಕಾಲ ಪ್ರಕಟವಾದ ಧಾರಾವಾಹಿ 'ಅಸತೋಮ' ಆರಂಭದಲ್ಲಿ ಕುತೂಹಲ ಮೂಡಿಸಿತು. ಬಳಿಕ ಒಂದು ಸಂಸಾರವನ್ನೇ ನಿರ್ನಾಮ ಮಾಡಿ ಅರುಂಧತಿ ಒಂದು ದಾರಿ, ಮದಂತ ಒಂದು ದಾರಿಯಲ್ಲಿ ಹೋದದ್ದು ಯಾವ ರೀತಿಯಲ್ಲೂ ಸರಿ ಎನಿಸದೆ ನಿರಾಸೆ ಮೂಡಿಸಿತು.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು